# ಅಂದು ಪೆಲೆ, ಇಂದು ಬಾಪೆ

ವಿಶ್ವ ಫುಟ್‌ಬಾಲ್ ರಂಗದಲ್ಲಿ ಕಪ್ಪು ವಜ್ರಗಳ ಹೊಳಪಿನ ಕಥೆ ಈ ಸಲವೂ ಮುಂದುವರಿದಿದೆ.

■ ಗಿರೀಶ ದೊಡ್ಡಮನಿ



ಫ್ರಾನ್ಸ್‌ನ ಬಾಪೆ

ಕೈಲಿಯನ್ ಬಾಪೆ ಎಂಬ 19 ವರ್ಷದ ಹುಡುಗ ಫಿಫಾ ವಿಶ್ವಕಪ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಅರ್ಜೆಂಟೀನಾ ತಂಡದ ಗೆಲುವಿನ ಕನಸನ್ನು ನುಚ್ಚುನೂರು ಮಾಡಿದರು. ಲಯೋನೆಲ್ ಮೆಸ್ಸಿ ಎಂಬ ದೈತ್ಯನಿಗೆ ಸವಾಲೊಡ್ಡಿದರು. ಅದೇ ಪಂದ್ಯದಲ್ಲಿ ಎರಡು ಗೋಲು ಹೊಡೆದು 60 ವರ್ಷಗಳ ಹಿಂದೆ ಬ್ರೆಜಿಲ್ ದಿಗ್ಗಜ ಪೆಲೆ ಮಾಡಿದ್ದ ದಾಖಲೆಯನ್ನೂ ಬಾಪೆ ಸರಿಗಟ್ಟಿದರು. ಈಗ ಫ್ರಾನ್ಸ್ ದೇಶದ ಕಣ್ಮಣಿ.

ಫ್ರಾನ್ಸ್ ತಂಡದಲ್ಲಿ ಹತ್ತಕ್ಕೂ ಹೆಚ್ಚು ಆಫ್ರಿಕಾ ಮೂಲದ ಆಟಗಾರರಿದ್ದು, ಅದರಲ್ಲಿ ಪಾಲ್ ಪೋಗ್ಬಾ ಎಂಬ ಪ್ರತಿಭಾಶಾಲಿ ಕೂಡ ಇದ್ದಾರೆ. ವಿಶ್ವದ ಹತ್ತು ಶ್ರೀಮಂತ ಫುಟ್‌ಬಾಲ್ ಆಟಗಾರರಲ್ಲಿ ಪೋಗ್ಬಾ ಕೂಡ ಒಬ್ಬರು.

ಬ್ರೆಜಿಲ್‌ನ ಪೆಲೆ ಯಶೋಗಾಥೆಯ ಪ್ರೇರಣೆಯಿಂದ ಬಾಪೆಯಂಥ ಅಪ್ಪಟ ಪ್ರತಿಭೆಗಳು ಫುಟ್‌ಬಾಲ್ ಅಂಗಳದಲ್ಲಿ ಬೆಳೆಯುತ್ತಿವೆ. ಈ ಬಾರಿ ಫಿಫಾ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿರುವ ಎರಡು ಪ್ರಮುಖ ತಂಡಗಳ ಸಾಧನೆಗೂ ಇಂಥ ಅಪ್ಪಟ ಆಟಗಾರರೇ ಕಾರಣರಾಗಿರುವುದು ವಿಶೇಷ.

## ರೊಮೆಲೊ ಲುಕಾಕು ಎಂಬ ದೈತ್ಯ

ಈ ಬಾರಿಯ ‘ಚಿನ್ನದ ಬೂಟು’ ಜಯಿಸುವವರ ರೇಸ್‌ನಲ್ಲಿ ಮುಂಚೂಣಿಯಲ್ಲಿರುವ ಬೆಲ್ಜಿಯಂ ಆಟಗಾರ ರೊಮೆಲೊ ಲುಕಾಕು 14 ವರ್ಷಗಳ ಹಿಂದೆ ಹರಿದ ಬೂಟಿಗಾಗಿ ಪರದಾಡಿದ್ದರು! ಬಡತನದಲ್ಲಿ ಬಾಲ್ಯ